ದಿನಾಂಕಃ 05.07.2025

ಅಸಲುದಾವಃ 48/2015

ಡಿ.ಡಬ್ಲ್ಯೂ: 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ</u>

ಪುರಸಭೆ ಮದ್ದೂರುರವರು ನೀಡಿರುವ ಆಸ್ತಿ ತೆರಿಗೆ ರಿಜಿಸ್ಟರ್ ವಹಿಯ ದೃಢೀಕೃತ ನಕಲನ್ನು ನಿಡಿ 80 ಎಂದು ಗುರುತಿಸಲಾಯಿತು. ನಿಡಿ3 ದಿ.25.09.1975 ರಂದು ನಾನು ಆರ್.ಶ್ರೀನಿವಾಸ್ ರಾವ್ ರವರಿಂದ ಸರ್ವೆ ನಂ.391/2 ರಲ್ಲಿ 5 ಗುಂಟೆ ವಿಸ್ತೀರ್ಣದ ಜಮೀನು ಖರೀದಿ ಮಾಡಿದ ಬಾಬ್ತು ಕ್ರಯ ಪತ್ರವಾಗಿರುತ್ತದೆ. ಶ್ರೀನಿವಾಸ್ ರಾವ್ ರವರು ಸದರಿ ಕ್ರಯ ಪತ್ರದ ಪ್ರತಿ ಪುಟದಲ್ಲಿಯೂ ಸಹಿ ಮಾಡಿರುತ್ತಾರೆ, ಸದರಿಯವರ ಸಹಿಗಳನ್ನು ನಿಡಿ3 ಎ ಮತ್ತು ಬಿ ಎಂದು ಗುರುತಿಸಲಾಯಿತು. ಸಾಕ್ಷಿದಾರರಾಗಿ ಕೆ.ದಾಸಶೆಟ್ಟರು, ಕೆ.ಚೌಡಯ್ಯ ಮತ್ತು ಕೆ.ರಾಮಣ್ಣ ಸಹಿ ಮಾಡಿರುತ್ತಾರೆ. ಸಾಕ್ಷಿ ಕೆ.ದಾಸಶೆಟ್ಟರು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಕೆ.ರಾಮಣ್ಣರವರು ಸಹಿ ಮಾಡಿರುತ್ತಾರೆ, ಸದರಿ ಸಹಿಯನ್ನು ಸಾಕ್ಷಿ ಗುರುತಿಸಿದ್ದು ನಿಡಿ3 ಸಿ ಎಂದು ಗುರುತಿಸಲಾಯಿತು. ಇನ್ನೊರ್ವ ಸಾಕ್ಷಿ ಕೆ.ಚೌಡಯ್ಯರವರು ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಸದರಿ ಸಹಿಯನ್ನು ನಿಡಿ3 ಡಿ ಎಂದು ಗುರುತಿಸಲಾಯಿತು. ಪತ್ರ ಬರಹಗಾರರಾದ ಎಸ್.ಕೃಷ್ಣಪ್ಪರವರು ಬಿಕ್ಲಂದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಸಹಿಯನ್ನು ಗುರುತಿಸುತ್ತೇನೆ. ಸಾಕ್ಷಿ ಸದರಿ ಸಹಿಯನ್ನು ಗುರುತಿಸಿದ್ದು ಅದನ್ನು ನಿಡಿ3 ಇ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರು ಹಾಜರಿಲ್ಲದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.